'ನಾನು ಏನು ತಪ್ಪು ಮಾಡಿದೆ ಅಂತ ಅಪ್ಪ ಅಮ್ಮ ನನ್ನನ್ನು ದೂರ ಮಾಡಿದ್ದಾರೆ ಸರ್? ನಾನು ಆತ್ಮಹತ್ಯೆ ಮಾಡಿಕೊಳ್ತೀನಿ' ಎಂದಳು.

'ಎಲ್ಲಾ ಸಮಸ್ಯೆಗಳಿಗೆ ಆತ್ಮಹತ್ಯೆ ಉತ್ತರವಾದೀತೆ ಸನ್ಮತಿ?' ಎಂದ ನರಹರಿ.

'ನಂಗೆ ಆಶ್ರಯ ನೀಡಿ ಸರ್. ನಾನು ನಿಮ್ಮ ಚಾಕರಿ ಮಾಡಿಕೊಂಡು, ಬದುಕಿನಲ್ಲಿ ಒಂದು ದಾರಿ ಕಾಣಿಸುವ ವರೆಗೆ ಇಲ್ಲೇ ಬಿದ್ದಿರ್ತೀನಿ ಸರ್. ನಂಗೆ ಬೇರೇನೂ ಬೇಡ. ಬೆಳಗ್ಗಿಂದ ಸಾಯಂಕಾಲದವರೆಗೆ ಎಲ್ಲಾ ಕೆಲಸಗಳನ್ನೂ ಮಾಡ್ತೀನಿ. ರಾತ್ರಿ ಹೊರಗೆ ಜಗಲಿಯಲ್ಲಿ ಚಾಪೆ ಹಾಸಿಕೊಂಡು ಮಲಗ್ತೀನಿ' ಎಂದಳು ಸನ್ಮತಿ. ಅವಳ ಮಾತಿಗೆ ನರಹರಿ ಏನೂ ಪ್ರತಿಕ್ರಿಯೆ ತೋರಲಿಲ್ಲ.

ಸನ್ಮತಿ ಹೇಳಿದಂತೆ, ಸಾಯಂಕಾಲ ಎಲ್ಲಿಂದಲೋ ಒಂದು ಹಳೆಯ ಹುಲ್ಲಿನ ಚಾಪೆ ತಂದು ಮನೆಯ ಜಗಲಿಯಲ್ಲಿ ಹಾಕಿ ಮಲಗಲು ಸಿದ್ಧಳಾದಳು. ಅದನ್ನು ಗಮನಿಸಿದ ನರಹರಿ, 'ಹೀಗೆಲ್ಲ ಮಾಡುವುದು ಸರಿಯಲ್ಲ ಸನ್ಮತಿ, ಸುರಕ್ಷಿತವೂ ಅಲ್ಲ' ಎಂದ ನರಹರಿ. ಸನ್ಮತಿ ಸುಮ್ಮನಿದ್ದಳು.

'ಇಲ್ಲಿ ಮಲಗುವ ಅಗತ್ಯವಾದರೂ ಏನು? ಮೇಲೆ ಮಹಡಿಯಲ್ಲಿ ನೀನು ಇಷ್ಟು ದಿನ ಮಲಗುತ್ತಿದ್ದ ಕೋಣೆಯಿದೆಯಲ್ಲಾ, ಅಲ್ಲೇ ಮಲಗು' ಎಂದ. ಸನ್ಮತಿ ಹಾಸಿಗೆಯನ್ನು ಸುತ್ತಿ ಮಹಡಿ ಮೇಲಕ್ಕೆ ಹೋಗಿ ತಾನು ಮಲಗುತ್ತಿದ್ದ ಕೋಣೆಯಲ್ಲಿ ಮಲಗಿದಳು.

19

ಮೂರು ದಿನಗಳ ಬಳಿಕ ನಡುರಾತ್ರಿಯಲ್ಲಿ ಕ್ಷಣಗಳ ಅಂತರದಲ್ಲಿ ಸನ್ಮತಿ ಎರಡು ಬಾರಿ ಜೋರಾಗಿ ಕಿರುಚಿದ ಶಬ್ದ ಕೇಳಿ, ಯಾಕಾಗಿರಬಹುದು ಎಂದು ಯೋಚಿಸುತ್ತಾ ನರಹರಿ ಮಹಡಿ ಮೇಲಕ್ಕೆ ಹೋದ. ಸನ್ಮತಿ ಹಾಸಿಗೆಯಲ್ಲಿ ಕುಳಿತುಕೊಂಡು ಭಯದಲ್ಲಿ ನಡುಗುತ್ತಿದ್ದಳು.

'ಯಾಕೆ ಹಾಗೆ ಕೂಗಿಕೊಂಡೆ? ಏನಾಯ್ತು?' ಎಂದು ನರಹರಿ ಕೇಳಿದ.

'ನಂಗೆ ಚೆನ್ನಾಗಿ ನಿದ್ದೆ ಬಂದಿತ್ತು ಸರ್, ಯಾರೋ ಬಂದು ಬಲವಾಗಿ ಅಪ್ಪಿ ಹಿಡಿದುಕೊಂಡಾಯಿತು. ಬಿಡು ಎಂದು ಕಿರುಚಿದೆ. ಕಣ್ಣು ತೆರೆದು ನೋಡಿದರೆ ಒಬ್ಬ ಧಡೂತಿ ಮನುಷ್ಯ ಎದುರು ನಿಂತಂತೆ ತೋರಿತು. ಪುನಃ ಹೆದರಿ ಕಿರುಚಿದೆ' ಎಂದಳು. ಸನ್ಮತಿಗೆ ಏನೋ ಕನಸು ಕಂಡಿರಬಹುದು ಎಂದನಿಸಿದರೂ ನರಹರಿ ಹಾಗೆ ಹೇಳಲಿಲ್ಲ. ನರಹರಿ ಅಲ್ಲೇ ಕುರ್ಚಿಯ ಮೇಲೆ ಕುಳಿತುಕೊಂಡ. ಬಾಗಿಲು ಕಾಣಿಸಿದಾಗ ಚಿಲಕ ಹಾಕಿರದಿದ್ದುದು ಕಾಣಿಸಿತು. 'ಯಾಕೆ ಚಿಲಕ ಹಾಕಿಕೊಂಡಿಲ್ಲ?' ನರಹರಿ ಕೇಳಿದ.

ಸನ್ಮತಿ ಕಂಪಿಸುವ ದನಿಯಲ್ಲಿ ಹೇಳಿದಳು, 'ಚಿಲಕ ಯಾವಾಗಲೂ ಹಾಕ್ತಿರ್ಲಿಲ್ಲ ಸರ್. ಮಹಡಿ ಹತ್ತಿ ಯಾರು ಬರ್ತಾರೆ ಅಂತ ಹಾಕ್ಕೊಂಡಿರ್ಲಿಲ್ಲ ಸರ್' ಎಂದಳು.

'ನಿಂಗೆ ಭೂತಪ್ರೇತಗಳಿವೆ ಅನ್ನೋ ನಂಬಿಕೆಯೇನಾದರೂ ಇದೆಯೆ?' ನರಹರಿ ಕೇಳಿದ. "ಚಿಕ್ಕವಳಿದ್ದಾಗ ಇತ್ತು, ಈಗ ನಿಜವಾಗಿ ಇಲ್ಲ' ಎಂದಳು.

'ನಿಜವಾಗಿ ಇಲ್ಲ ಅಂದ್ರೆ ಏನರ್ಥ?' ನರಹರಿ ಕೇಳಿದ.

'ಭೂತಪ್ರೇತಗಳು ಇಲ್ಲ ಅಂತ ಈಗ ಗೊತ್ತಿದೆ ಸರ್, ಭಯ ಮಾತ್ರ ಹೋಗಿಲ್ಲ' ಎಂದಳು ಸನ್ಮತಿ.

'ಚಿಲಕ ಹಾಕಿ ಮಲಗು, ಭಯ ತಾನಾಗಿ ಹೋಗುತ್ತೆ' ಎಂದು ಹೇಳಿ ನರಹರಿ ಹೋದ.

**ಕವನ**

ಹುಡುಗ ಹಾಳೆಯಲ್ಲಿ
ಏನೋ ಗೀಚುತ್ತಿದ್ದಾನೆ
ಕವನ ಬರೆಯುತ್ತಿರಬಹುದು
ಪ್ರೀತಿ ಹುಟ್ಟಿರಬಹುದು
ಇಲ್ಲಾ ಹುಡುಗಿ
ಕೈಕೊಟ್ಟಿರಬಹುದು..!

★ ಆರ್.ಸುನೀಲ್ ತರೀಕೆರೆ



ಎರಡು ದಿನಗಳ ಬಳಿಕ ಸನ್ಮತಿ ನರಹರಿಯ ಬಳಿ, ಅಣ್ಣ ಅಮರೇಶನ ಸುದ್ದಿಯೇ ಇಲ್ಲ ಸರ್, ನಿನ್ನೆ ಯಾರೋ ಒಬ್ಬರು ಫೋನು ಮಾಡಿ, 'ಅಮರೇಶ ಮುಂಬಯಿಯಲ್ಲಿ ಒಂದು ಫೈವ್ ಸ್ಟಾರ್ ಹೋಟೆಲಿನಲ್ಲಿ ಚೆಫ್ ಆಗಿ ಕೆಲಸ ಮಾಡುತ್ತಿದ್ದಾನೆ ಅಂತ ಹೇಳಿದರು. ಮಾತಾಡಿದವರೊಡನೆ, 'ನೀವು ಯಾರು? ಅನ್ನುವಾಗ ಫೋನು ಕಟ್ ಆಯ್ತು' ಎಂದಳು.

ನರಹರಿ ಸುಮ್ಮನಿದ್ದ.

ನಾಲ್ಕು ದಿನಗಳ ಬಳಿಕ ನಡು ರಾತ್ರಿ ಸನ್ಮತಿ ಕಿರುಚಿಕೊಂಡು ಮಹಡಿಯಿಂದ ವೇಗವಾಗಿ ಇಳಿದುಕೊಂಡು ಬಂದು, ನರಹರಿಯ ಕೋಣೆಯ ಬಾಗಿಲ ಹೊರಗಡೆ ನಿಂತು ರೋದಿಸಿದಳು.

ನಿದ್ರೆಯಲ್ಲಿದ್ದ ನರಹರಿ ಎದ್ದು ಬಂದು ಬಾಗಿಲು ತೆರೆದು, 'ಏನು ಸನ್ಮತಿ, ಪುನಃ ಏನಾಯಿತು?'ಎಂದು ಕೇಳಿದ.

'ಮೊನ್ನೆ ಆದ ಹಾಗೆಯೇ ಆಯ್ತು ಸರ್, ಈ ಸಲ ಅವ್ನು ನನ್ನನ್ನು ಬಲವಾಗಿ ಹಿಡಿದುಕೊಂಡು, ನನ್ನ ಜೊತೆ ಬಾ. ಬರದಿದ್ರೆ ಇಲ್ಲೇ ಕೊಂದು ಹಾಕ್ತೀನಿ ಅಂತ ನನ್ನ ಕಿವಿಯಲ್ಲಿ ಪಿಸುಗುಟ್ಟಿದ' ಎಂದು ಹೇಳಿ ಸನ್ಮತಿ ಭಯದಲ್ಲಿ ಕಂಪಿಸುತ್ತಾ 'ನಾನು ಇಲ್ಲೇ ಬಾಗಿಲ ಹೊರಗೆ ಮಲಗ್ತೀನಿ ಸರ್' ಎಂದಳು.

ಪ್ರೀತಿ ಅನುಕಂಪಗಳ ದಯೆ ದಾಕ್ಷಿಣ್ಯಗಳ ಸಾಗರವಾಗಿದ್ದ ನರಹರಿ, 'ಇಲ್ಲಿ ಮಲಗೋದು ಚೆನ್ನಾಗಿರಲ್ಲ; ಚಾಪೆ ಎತ್ತಿಕೊಂಡು ಕೋಣೆಯ ಒಳಗೆ ಬಾ, ಒಂದು ಮೂಲೆಯಲ್ಲಿ ಮಲಗು. ಗೊರಕೆ ಹೊಡೀತೀಯ?'

'ಇಲ್ಲ ಸರ್' ಸನ್ಮತಿಯೆಂದಳು.

'ಗೊರಕೆ ಹೊಡೆಯುವ ಅಭ್ಯಾಸವಿದ್ರೆ, ಆ ಕಡೆ ಅಡುಗೆ ಕೋಣೆಯಲ್ಲಿ ಸಾಕಷ್ಟು ಜಾಗ ಇದೆ ಅಲ್ಲಿ ಮಲಗು' ನರಹರಿ ಎಂದ.

ಸನ್ಮತಿ ಚಾಪೆ ಎತ್ತಿಕೊಂಡು ಅಡುಗೆ ಕೋಣೆಗೆ ಹೋದಳು.

ನಡು ರಾತ್ರಿಯಲ್ಲಿ ತನ್ನ ಕಾಲುಗಳ ಮೇಲೆ ಏನೋ ಹರಿದಾಡಿದಂತಾಗಿ ಎಚ್ಚರಗೊಂಡ ನರಹರಿ ಎದ್ದು ಕುಳಿತ.

ನರಹರಿಯ ಪಾದಗಳನ್ನು ಮೃದುವಾಗಿ ಸವರುತ್ತಿದ್ದಳು ಸನ್ಮತಿ, 'ಯಾಕೆ ಏನಾಯ್ತು? ಯಾಕೆ ಎದ್ದು ಬಂದೆ?' ನರಹರಿ ಕೇಳಿದ.

ಸನ್ಮತಿ ದುಃಖಿಸುತ್ತಾ,'ನಾನು ಅನಾಥಳಾದೆ ಸರ್, ನನಗೆ ಬದುಕು ಬೇಡವಾಗಿದೆ. ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆ ಬರ್ತಿದೆ. ಬದುಕಿ ಉಳಿಯ ಬೇಕಿದ್ದರೆ ನನಗೆ ನಿಮ್ಮ ಪಾದವೇ ಗತಿ, ನೀವೇ ಗತಿ' ಎಂದು ಹಲುಬುತ್ತಾ ನರಹರಿಯನ್ನು ಬಲವಾಗಿ ತಬ್ಬಿಕೊಂಡಳು ಸನ್ಮತಿ. ಮೇ ತಿಂಗಳ ಸೆಕೆಯಲ್ಲಿ ಮೈಮೇಲೆ ಒಳ ಚಡ್ಡಿ ತೊಟ್ಟು ಮೈಮೇಲೆ ಒಂದು ತೆಳ್ಳನೆಯ ಬಟ್ಟೆಯನ್ನು ಮಾತ್ರ ಎಳೆದುಕೊಂಡಿದ್ದ ನರಹರಿ. ಸನ್ಮತಿಯ ಅಪ್ಪುಗೆಯಲ್ಲಿ ಮೈಮೇಲಿನ ಬಟ್ಟೆ ಸರಿದುಹೋಯಿತು. ಸನ್ಮತಿ ಆವೇಶದಿಂದ ಒಂದೇ ಸವನೆ ನರಹರಿಯನ್ನು ಚುಂಬಿಸುತ್ತಾ, ಅವನ ಹೊಟ್ಟೆ ಮತ್ತು ಎದೆಯ ಮೇಲೆ ತುಟಿ ಹರಿದಾಡಿಸಿ, ಇಡೀ ಮೈಯನ್ನು ಚುಂಬಿಸುತ್ತಾ ನಾಯಿಯಂತೆ ನೆಕ್ಕಿದಳು. ಆ ಅಪೂರ್ವ ರಸನ ಚುಂಬನ ಸ್ನಾನದಿಂದ ನರಹರಿ ತನಗರಿವಿಲ್ಲದೆ ಸ್ವಾಭಾವಿಕ ವಾಗಿಯೇ ವಿಕಾರಕ್ಕೊಳಗಾದ. ಸನ್ಮತಿ ತನ್ನ ಉದ್ದೇಶದಲ್ಲಿ ಸಫಲಳಾದಳು. ಅದು ಎಷ್ಟೋ ದಿನಗಳಿಂದ ಆಂತರ್ಯದಲ್ಲಿ ನರಹರಿ ನರಹರಿ ಎಂದು ಅವಳು ಮಾಡುತ್ತಿದ್ದ ತಪಸ್ಸಿನ ಪರಾಕಾಷ್ಠೆಯಾಗಿತ್ತು. ಇಷ್ಟು ಕಾಲ ಸನ್ಮತಿ ಸಿದ್ಧಿಸಿ ಕೊಂಡು ಸುರಿಸುತ್ತಿದ್ದ ಅರ್ಥವಿಹೀನ ಕಣ್ಣೀರಿಗೆ ಈಗ ಅರ್ಥ ಬಂದಿತ್ತು. ಅವಳ ಹೃನ್ಮನ 'ನಾನು ಗೆದ್ದೆ, ಕೊನೆಗೂ ಗೆದ್ದೆ' ಎಂದು ಹಾಡತೊಡಗಿತು. ಒಂದು ಅಪೂರ್ವವಾದ ಧೈರ್ಯ ಅವಳ ಇಡೀ ಶರೀರದಲ್ಲಿ ಹರಿದಾಡಿತು. ಹೆಣ್ಣು ಗೆಲ್ಲುವ ಪಣ ತೊಟ್ಟರೆ ಇಡೀ ಜಗತ್ತನ್ನೇ ತನ್ನದಾಗಿಸಿಕೊಳ್ಳಬಲ್ಲಳು ಎಂದನಿಸಿತು ಸನ್ಮತಿಗೆ.

ರೋಗಗ್ರಸ್ತಳಾಗಿ ಬಹಳ ಕಾಲದಿಂದ ಸ್ಪರ್ಶಕ್ಕೆ ದೂರವಾಗಿದ್ದ ಶಾಲ್ಮಲಿಯ ನೆನಪಾಗದಿರಲಿಲ್ಲ ನರಹರಿಗೆ. ಹೌದು, ಇದು ಜನ್ಮಾಂತರ, ಅದು ಬೇರೆಯೇ ಬದುಕು ಇದು ಬೇರೆಯೇ ಬದುಕು ಎಂದು ಅನಿಸಿತು. ಎಲ್ಲಿದೆ ಬದುಕು, ಬದುಕು ಇರುವುದು ಇಷ್ಟೆ ಎಂದು ಕೂಡ ಅನಿಸಿತು ನರಹರಿಗೆ. ಸನ್ಮತಿ ಅವನನ್ನು ಬಿಡಲಿಲ್ಲ. ಎಷ್ಟು ಗಾಢವಾಗಿ ಪ್ರೀತಿಸತೊಡಗಿದಳೆಂದರೆ, ನರಹರಿ ಯನ್ನು ಒಂದೇ ಸವನೆ, "ನನ್ನ ದೇವರೆ ನನ್ನ ದೇವರೆ'' ಎಂದು ಸಂಬೋಧಿಸ ತೊಡಗಿದಳು. ಮರವೇರಲು ತಡಕುತ್ತಾ ಹೇಗೋ ಮರ ಏರಿ ಸುತ್ತಿಕೊಳ್ಳುವ ಬಳ್ಳಿಯಂತೆ ರಾತ್ರಿ ಹಗಲು ನರಹರಿಗೆ ಅಂಟಿಕೊಂಡು ಅವನ ಸೇವೆ ಮಾಡುತ್ತಾ ಅವನ ಜೀವಂತ ನೆರಳಾದಳು ಸನ್ಮತಿ. ಪ್ರೀತಿಯ ಸಾಗರವಾಗಿ ಎಲ್ಲರನ್ನೂ